ಕರ್ನಾಟಕ ವಿಧಾನ ಸಭೆ, ಸಂಶೋಧನಾ ಮತ್ತು ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ದಿನಾಂಕ : DATE : 29/07/2019
ಇಲಾಖೆ / ವಿಷಯ: DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER :

## ವಿಶ್ವನಾಥ್ ಸೇರಿ ಮತ್ತೆ 14 ಶಾಸಕರನ್ನು ಅನರ್ಹಗೊಳಿಸಿದ ರಮೇಶ್‌ಕುಮಾರ್

### ಇಂದು ಯಡಿಯೂರಪ್ಪ ವಿಶ್ವಾಸಮತ ಸಲೀಸು । ಅತೃಪ್ತರು ಇಂದೇ ಸುಪ್ರೀಂಗೆ

# ಸ್ಪೀಕರ್ ರೂಲ್ ಸಿಎಂ ಕೂಲ್

ವಿಶ್ವ ಸುದ್ದಿಲೋಕ ಬೆಂಗಳೂರು

ಬಂಡಾಯದ ಬಾವುಟ ಹಾರಿಸಿದ್ದ ಕಾಂಗ್ರೆಸ್–ಜೆಡಿಎಸ್‌ನ ಎಲ್ಲ 17 ಶಾಸಕರು ಅನರ್ಹಗೊಳಿಸುವ ಮಹತ್ವದ ತೀರ್ಮಾನವನ್ನು ಸ್ಪೀಕರ್ ರಮೇಶ್ ಕುಮಾರ್ ಪ್ರಕಟಿಸಿದ್ದಾರೆ. ಕಳೆದ ಗುರುವಾರ ಮೂವರನ್ನು ಅನರ್ಹಗೊಳಿಸಿದ್ದ ಅವರು ಭಾನುವಾರ ಉಳಿದ 14 ಮಂದಿಯನ್ನು ಶಾಸಕತ್ವದಿಂದ ಮುಕ್ತಗೊಳಿಸಿದ್ದಾರೆ. ಇದರಿಂದಾಗಿ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಸರಕಾರಕ್ಕೆ ಸೋಮವಾರ ರಾಜ್ಯ ವಿಧಾನಸಭೆಯಲ್ಲಿ ವಿಶ್ವಾಸಮತ ಸಾಬೀತುಪಡಿಸುವುದು ಸರಾಗವಾಗಿದೆ.

17 ಮಂದಿಯ ಅನರ್ಹತೆಯೊಂದಿಗೆ 225 ಸದಸ್ಯಬಲದ ರಾಜ್ಯ ವಿಧಾನಸಭೆಯ ಶಾಸಕರ ಸಂಖ್ಯೆ 208ಕ್ಕೆ ಕುಸಿದಿದೆ. ಪಕ್ಷೇತರ ನಾಗೇಶ್ ಬೆಂಬಲ ಹೊಂದಿರುವ ಬಿಜೆಪಿ ಬಲ 106 ಆಗಲಿದ್ದು, 105ರ ಮ್ಯಾಜಿಕ್ ಸಂಖ್ಯೆ ದಾಟುವುದು ಸುಲಭವಾಗಲಿದೆ. 208 ಶಾಸಕರ ಪೈಕಿ ಅನಾರೋಗ್ಯದ ಕಾರಣ ನೀಡಿರುವ ಕಾಂಗ್ರೆಸ್‌ನ ನಾಗೇಂದ್ರ ಮತ್ತು ಬಿಎಸ್‌ಪಿಯ ಮಹೇಶ್ ಗೈರುಹಾಜರಾಗುವ ಸಾಧ್ಯತೆ ಇದೆ.

ಸ್ಪೀಕರ್ ತೀರ್ಮಾನದಿಂದ ರೆಬೆಲ್‌ಗಳ ಭವಿಷ್ಯ ಅತಂತ್ರವಾಗಿದ್ದರೂ ಬಿಜೆಪಿಗೆ ವರವಾಗಿದೆ. ವಿಶ್ವಾಸಮತ ಗೆದ್ದ ನಂತರ ಯಡಿಯೂರಪ್ಪ ಮುಂದಿನ 6 ತಿಂಗಳು ನಿರಾತಂಕವಾಗಲಿದೆ. ಈ ಮಧ್ಯೆ, ಅನರ್ಹಗೊಂಡ ಶಾಸಕರು ಇಂದು ಸುಪ್ರೀಂಕೋರ್ಟ್ ಮೊರೆ ಹೋಗಲಿದ್ದಾರೆ.



### ಅನರ್ಹಗೊಂಡ 14 ಶಾಸಕರು

ಕಾಂಗ್ರೆಸ್‌ನ ಪ್ರತಾಪ್ ಗೌಡ ಪಾಟೀಲ್, ಬಿ.ಸಿ.ಪಾಟೀಲ್, ಶಿವರಾಮ ಹೆಬ್ಬಾರ್, ಎಸ್.ಟಿ. ಸೋಮಶೇಖರ್, ಭೈರತಿ ಬಸವರಾಜ್, ಆನಂದ್ ಸಿಂಗ್, ರೋಷನ್ ಬೇಗ್, ಮುನಿರತ್ನ, ಡಾ. ಕೆ. ಸುಧಾಕರ್, ಎಂ.ಟಿ.ಬಿ ನಾಗರಾಜ್, ಶ್ರೀಮಂತ ಪಾಟೀಲ್, ಜೆಡಿಎಸ್‌ನ ಎಚ್. ವಿಶ್ವನಾಥ್, ನಾರಾಯಣ ಗೌಡ, ಗೋಪಾಲಯ್ಯ



### ವಿಧಾನಸಭೆ ಬಲಾಬಲ

| | |
|---|---|
| ಒಟ್ಟು | 225 |
| ಅನರ್ಹರು | 17 |
| ಹಾಲಿ ಬಲ | 208 |
| ಮ್ಯಾಜಿಕ್ ನಂಬರ್ | 105 |
| ಬಿಜೆಪಿ ಪ್ಲಸ್ | 106 |
| ಕಾಂಗ್ರೆಸ್–ಜೆಡಿಎಸ್ | 101 |
| ಬಿಎಸ್ಪಿ | 1 |

### ಸ್ಪೀಕರ್ ವಿರುದ್ಧ | ಕಾನೂನು ತಜ್ಞರ ಭಿನ್ನ ಅಭಿಪ್ರಾಯ | ಸ್ಪೀಕರ್ ಪರ

ಸುಪ್ರೀಂಕೋರ್ಟ್ ನೀಡಿರುವ ಆದೇಶಕ್ಕೆ ವಿರುದ್ಧವಾದ ಈ ತೀರ್ಪು ನ್ಯಾಯಾಂಗ ನಿಂದನೆಯಾಗುತ್ತದೆ. ಶಾಸಕರು ಚುನಾವಣೆಗೆ ಸ್ಪರ್ಧಿಸುವಂತಿಲ್ಲ ಎಂಬುದು ಸಂವಿಧಾನದ ಆಶಯಕ್ಕೆ ವಿರುದ್ಧ.

**-ಬಿ.ವಿ. ಆಚಾರ್ಯ** ಮಾಜಿ ಅಡ್ವೊಕೇಟ್ ಜನರಲ್

ಸ್ಪೀಕರ್ ಉಲ್ಲೇಖಿಸಿರುವ ರವಿ ನಾಯಕ್ ಪ್ರಕರಣಕ್ಕೂ ಪ್ರಸ್ತುತ ಸಂದರ್ಭಕ್ಕೂ ವ್ಯತ್ಯಾಸವಿದೆ. ಅಲ್ಲಿ ಕೇವಲ ವಿಪ್ ಉಲ್ಲಂಘನೆಯಾಗಿತ್ತು. ಆದರೆ ಇಲ್ಲಿ ಕಲಾಪಕ್ಕೆ ಬರುವಂತೆ ಶಾಸಕರ ಮೇಲೆ ಒತ್ತಡ ಹೇರುವಂತಿಲ್ಲ ಎಂದು ನ್ಯಾಯಾಲಯ ಹೇಳಿದೆ.

**-ಅಶೋಕ್ ಹಾರನಹಳ್ಳಿ** ಮಾಜಿ ಅಡ್ವೊಕೇಟ್ ಜನರಲ್

ಶಾಸಕರು ಪಕ್ಷಾಂತರಕ್ಕಾಗಿಯೇ ಈ ರೀತಿ ವರ್ತಿಸಿದ್ದಾರೆ ಎಂಬುದನ್ನು ತಳ್ಳಿಹಾಕಲಾಗದು. ಸ್ಪೀಕರ್ ನಿರ್ಧಾರ ತಪ್ಪು ಎಂದಾದರೆ 10ನೇ ಪರಿಚ್ಛೇದದ ಆಶಯವೇ ನಿರರ್ಥಕವಾಗಿ ಬಿಡುತ್ತದೆ.

**-ಶಶಿಕಿರಣ್ ಶೆಟ್ಟಿ** ವಕೀಲರು

ಪಕ್ಷಾಂತರ ತಡೆಯಲೆಂದೇ ಕಾಯಿದೆ ಮಾಡಲಾಗಿದೆ. ಸಂವಿಧಾನದ ಅಂಶಗಳನ್ನು ಅರಿತೇ ಸ್ಪೀಕರ್ ಅನರ್ಹಗೊಳಿಸಿದ್ದಾರೆ. ಪಕ್ಷಾಂತರಿ ಶಾಸಕರಿಗೆ ಇದು ಪಾಠವಾಗಬೇಕು. 1984ರಲ್ಲಿಯೂ ಎನ್.ಟಿ. ರಾಮರಾವ್ ಸರಕಾರ ಇದ್ದಾಗ ಇದೇ ರೀತಿ ಆಗಿತ್ತು.

**-ಸಂಜಯ್ ಹೆಗಡೆ** ಸುಪ್ರೀಂ ಕೋರ್ಟ್ ವಕೀಲರು

ಸಿದ್ದರಾಮಯ್ಯ ಮತ್ತು ಕುಮಾರಸ್ವಾಮಿ ಮೂಲಗಷ್ಟೇ ಸ್ಪೀಕರ್ ಸ್ಪಂದಿಸಿದ್ದಾರೆ. ನಮ್ಮ ನೋವನ್ನು ಕೇಳಿಯೇ ಇಲ್ಲ. ಇದರ ವಿರುದ್ಧ ಸುಪ್ರೀಂಕೋರ್ಟ್‌ಗೆ ಹೋಗುತ್ತೇವೆ.

**-ಎಚ್.ವಿಶ್ವನಾಥ್** ರೆಬೆಲ್ ಶಾಸಕ

ಸರಕಾರ ಪತನ ಕಾಂಗ್ರೆಸ್ ಪ್ಲ್ಯಾನ್, ನಾವು ನೆಪ ಎಂದ ಮುನಿರತ್ನ

»02

# ಸ್ಪೀಕರ್ ರೂಲ್, ಸಿಎಂ ಕೂಲ್!

» ಮೊದಲ ಪುಟದಿಂದ

ಎಚ್.ಡಿ.ಕುಮಾರಸ್ವಾಮಿ ವಿಶ್ವಾಸಮತ ಮಂಡಿಸಿದಾಗ ಅದರ ಪರವಾಗಿ 99 ಮತಗಳು ಬಂದಿದ್ದವು. ವಿರುದ್ಧವಾಗಿ 105 ಮತಗಳು ಬಂದಿದ್ದವು. ಆಗ ದೋಸ್ತಿ ಸರಕಾರದ ಪರವಾಗಿ ಡೆಪ್ಯೂಟಿ ಸ್ಪೀಕರ್ ಕೃಷ್ಣಾರೆಡ್ಡಿ ಮತ್ತು ಆಂಗ್ಲೊ ಇಂಡಿಯನ್ ಕೋಟಾದ ನಾಮಕರಣ ಸದಸ್ಯೆ ವಿನಿಶಾ ನೀರೋ ಮತ ಚಲಾಯಿಸಿದ್ದರು. ಕಾಂಗ್ರೆಸ್ ಶಾಸಕ ಬಿ. ನಾಗೇಂದ್ರ ಅನಾರೋಗ್ಯದ ಕಾರಣ ಗೈರು ಹಾಜರಾಗಿದ್ದರು. ಪಕ್ಷದ ವರಿಷ್ಠೆ ಮಾಯಾವತಿ ಆದೇಶವಿದ್ದರೂ ಸದನಕ್ಕೆ ಚಕ್ಕರ್ ಹಾಕಿದ್ದ ಬಿಎಸ್ಪಿಯ ಎನ್.ಮಹೇಶ್ ನಂತರ ಉಚ್ಚಾಟನೆಗೊಂಡಿದ್ದಾರೆ.

**ಸದ್ಯಕ್ಕಂತೂ ದೋಸ್ತಿ ಒಗ್ಗಟ್ಟು**

ಜೆಡಿಎಸ್ ಸಹವಾಸ ಇನ್ನು ಸಾಕು ಎಂಬ ಅಭಿಪ್ರಾಯ ಕಾಂಗ್ರೆಸ್‌ನಲ್ಲಿದೆ. ಬಿಜೆಪಿಗೆ ಬಾಹ್ಯ ಬೆಂಬಲ ನೀಡಬೇಕೆಂಬ ಒತ್ತಡ ಜೆಡಿಎಸ್‌ನಲ್ಲೂ ಇದೆ. ಈ ನಡುವೆಯೂ ದೋಸ್ತಿ ಪಕ್ಷಗಳು ಸದ್ಯಕ್ಕೆ ಒಗ್ಗಟ್ಟಾಗಿರಲು ಮನಸ್ಸು ಮಾಡಿವೆ. ಸದನದಲ್ಲಿ ಆಡಳಿತಾರೂಢ ಬಿಜೆಪಿಯನ್ನು ಇಕ್ಕಟ್ಟಿಗೆ ಸಿಲುಕಿಸುವುದು ದೋಸ್ತಿಗಳ ಕಾರ್ಯಸೂಚಿ.

**ಸೋಮವಾರ ಬೆಳಗ್ಗೆ 11ಕ್ಕೆ ವಿಧಾನಸಭೆ ಕಲಾಪ ಆರಂಭವಾಗುತ್ತಿದ್ದಂತೆ ಸಿಎಂ ಯಡಿಯೂರಪ್ಪ ವಿಶ್ವಾಸಮತದ ಪ್ರಸ್ತಾವ ಮಂಡಿಸಲಿದ್ದಾರೆ. ಸಂಖ್ಯಾಬಲದ ಕೊರತೆ ಇರುವುದರಿಂದ ದೋಸ್ತಿಗಳು ಮತ ವಿಭಜನೆಗೆ ಆಗ್ರಹಿಸುವ ಸಾಧ್ಯತೆ ಇದ್ದಂತಿಲ್ಲ. ಹಾಗಾಗಿ, ಧ್ವನಿಮತದ ಮೂಲಕ ವಿಶ್ವಾಸಮತ ಅಂಗೀಕಾರಗೊಂಡರೂ ಅಚ್ಚರಿಯಿಲ್ಲ. ಪ್ರತಿಪಕ್ಷಗಳು ಸಭಾತ್ಯಾಗ ಮಾಡುವ ಸಾಧ್ಯತೆಯೂ ಇದೆ. ವಿಶ್ವಾಸಮತ ಪ್ರಕ್ರಿಯೆ ಬಳಿಕ ಧನ ವಿನಿಯೋಗ ವಿಧೇಯಕ ಮಂಡನೆಯಾಗಲಿದೆ.**